ದಿನಾಂಕಃ 28.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಸಿ.ಎಸ್.ಕೆ ರವರಿಂದಃ

ನಾನು ಸಿ.ಸಿ ನಂ. 1000/2011 ರಲ್ಲಿ ಸಾಕ್ಷ್ಯ ನುಡಿದ ಸಂದರ್ಭದಲ್ಲಿ 9 ಫೋಟೋಗಳನ್ನು ಮಾತ್ರ ಹಾಜರುಪಡಿಸಿದ್ದೆನು ಎಂದರೆ ನನಗೆ ಈಗ ನೆನಪಿಲ್ಲ. ನಾನು ಹೊಸದಾಗಿ 9 ಫೋಟೋಗಳನ್ನು ಸೃಷ್ಟಿ ಮಾಡಿ ಸಾಕ್ಷ್ಯ ವಿಚಾರಣೆಯ ಸಂದರ್ಭದಲ್ಲಿ ಹಾಜರುಪಡಸಿದ್ದೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ಹಾಜರುಪಡಿಸುವಂತೆ ನ್ಯಾಯಾಲಯ ನನಗೆ ಆದೇಶ ಮಾಡಿರುವುದಿಲ್ಲ. ನಾನು ಸ್ಟುಡಿಯೋ ಇಟ್ಟುಕೊಂಡಿರುವುದಿಲ್ಲ. ಆದರೆ ನನ್ನ ಬಳಿ ಯು.ವಿ ಲ್ಯಾಂಪ್ ಮತ್ತು ಐ.ಆರ್.ಆರ ಲ್ಯಾಂಪ್ ಇದೆ. ಸದರಿ ಉಪಕರಣಗಳನ್ನು ಹೊಂದಲು ಸರ್ಕಾರದ ಪರವಾನಗಿಯ ಅವಶ್ಯಕತೆ ಇರುವುದಿಲ್ಲ. ನಾನು ಸಿ.ಸಿ ನಂ. 1000/2011 ರಲ್ಲಿ ಸಾಕ್ಷ್ಯ ನುಡಿದಾಗ ಬೇರೆ ಸ್ಟುಡಿಯೋದಲ್ಲಿ ಯು.ವಿ ಲ್ಯಾಂಪ್ ಮತ್ತು ಐ.ಆರ್.ಆರ ಲ್ಯಾಂಪ್‌ಗಳನ್ನು ಬಳಸಿ ಫೋಟೋಗಳನ್ನು ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಆ ಬಗ್ಗೆ ಸ್ಟುಡಿಯೋದವರಿಂದ ದೃಡೀಕೃತ ದಾಖಲೆಗಳನ್ನು ಪಡೆದಿರುವುದಿಲ್ಲ. ನಾನು ಮತ್ತು ಪ್ರತಿವಾದಿ ಸೇರಿ ನಿಶಾನೆ 12 ರಲ್ಲಿನ ಫೋಟೋಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಆನ್ ಲೈನ್ ನಲ್ಲಿ ಹ್ಯಾಂಡ್ ರೈಟಿಂಗ್ ಆ್ಯಂಡ್ ಫಿಂಗರ್ ಪ್ರಿಂಟ್ಸ್ ಬಗ್ಗೆ ಕೋರ್ಸ್ ತೆಗೆದಿಕೊಂಡಿರುತ್ತೇನೆ, ನಂತರ 2005 ರಲ್ಲಿ ವಿ.ಸಿ. ಮಿಶ್ರಾ, ಪ್ರೊಫೆಸರ್, ಪೊರೆನ್ಸಿಕ್ ಸೈನ್ಸ್, ಹ್ಯಾಂಡ್ ರೈಟಿಂಗ್ ಆ್ಯಂಡ್ ಫಿಂಗರ್ ಪ್ರಿಂಟ್ಸ್ ಎಕ್ಸ್ ಫರ್ಟ್, ಆಮಿಟಿಂಗ್ ಯುನಿವರ್ಸಿಟಿ

ಡೆಲ್ಲಿ ಇವರ ಬಳಿ ಹ್ಯಾಂಡ್ ರೈಟಿಂಗ್ ಆ್ಯಂಡ್ ಫಿಂಗರ್ ಪ್ರಿಂಟ್ ಬಗ್ಗೆ ತರಬೇತಿ ಪಡೆದುಕೊಂಡಿರುತ್ತೇನೆ. ಸದರಿ ಮಿಶ್ರಾ ನನ್ನ ತರಬೇತಿಯ ಬಗ್ಗೆ ಸರ್ಟಿಫಿಕೇಟ್ ನೀಡಿರುತ್ತಾರೆ. ಸಾಕ್ಷಿಯು ತಮ್ಮ ಕಡತದಿಂದ, ಅವರ ತರಬೇತಿಗೆ ಸಂಬಂಧಿಸಿದಂತೆ ಸರ್ಟಿಫಿಕೇಟ್ ನ ಪ್ರತಿಯನ್ನು ತೋರಿಸಿರುತ್ತಾರೆ. ನಾನು ಕೋರ್ಸ್ ಪಡೆದುಕೊಂಡು ಸಂಸ್ಥೆ ಅಮೇರಿಕಾದ ಸಂಸ್ಥೆ ಎಂದರೆ ಸರಿ. ಸದರಿ ಸಂಸ್ಥೆ ಭಾರತದಲ್ಲಿ ಇಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಸದರಿ ಸಂಸ್ಥೆಯು ಜಾಗತೀಕವಾಗಿ ಗುರುತಿಸಿರುತ್ತಾರೆ ಎಂದು ಹೇಳುತ್ತಾರೆ.

ಸದರಿ ಸಂಸ್ಥೆಯನ್ನು ಭಾರತದಲ್ಲಿ ಗುರುತಿಸಿರುತ್ತಾರೆ ಎಂದು ಹೇಳಲು ಯಾವುದಾದರೂ ನೋಂದಾಯಿತ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಇಲ್ಲ. ಸಾಕ್ಷಿಯು ಮುಂದುವರೆದು ಸಿ.ಬಿ.ಐ ಇಲಾಖೆಯವರು ಸಹ ಸದರಿ ಸಂಸ್ಥೆಯಲ್ಲಿ ತರಬೇತಿ ಪಡೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ನಾನು ಸದರಿ ಸಂಸ್ಥೆಯಿಂದ ಟ್ಯೂಷನ್ ಪಡೆದುಕೊಂಡಿರುವುದಿಲ್ಲ. ಬದಲಿಗೆ ಕೋರ್ಸ್ ಅನ್ನು ಪಡೆದುಕೊಂಡಿದ್ದು, ಮಿಶ್ರಾ ರವರ ಬಳಿ  ಪ್ರಾಯೋಗಿಕ ತರಬೇತಿ ಪಡೆದುಕೊಂಡಿರುತ್ತೇನೆ. ಮಿಶಾರವರ ಬಳಿ ತರಗತಿಗೆ ಹಾಜರಾಗಿರುತ್ತೇನೆ. ನಾನು ಮಿಶ್ರಾರವರ ಬಳಿ ತರಬೇತಿಗೆ ದಾಖಲಾಗಿರುವುದಿಲ್ಲ. ಆದರೆ, ಅವರ ಬಳಿ ತರಬೇತಿ ಪಡೆದಿರುತ್ತೇನೆ. ಸದರಿ ಸಂಸ್ಥೆಯಲ್ಲಿ 1 ವರ್ಷದ ಕೋರ್ಸ್ ಪಡೆದುಕೊಂಡಿರುತ್ತೇನೆ, ಕೋರ್ಸ್ ಮುಗಿದ ನಂತರ ಪರೀಕ್ಷೆ ಮಾಡಿರುತ್ತಾರೆ. ಸಾಮಾನ್ಯವಾಗಿ ಯಾವುದೇ ಕೋರ್ಸ್ ನಲ್ಲಿ ಪರೀಕ್ಷೆ ಮುಗಿದ ನಂತರದಲ್ಲಿ ಪಾಸಾಗಿದ್ದರೆ ಪಾಸ್ ಆದ ಬಗ್ಗೆ ಸರ್ಟಿಫಿಕೇಟ್ ನೀಡುತ್ತಾರೆ ಎಂದರೆ ಸರಿ. ನಾನು ಸದರಿ ಕೋರ್ಸ್ ನ ಪರೀಕ್ಷೆಯಲ್ಲಿ ಆನ್ ಲೈನ್ ಪರೀಕ್ಷೆ ತೆಗೆದುಕೊಂಡು ಪಾಸ್ ಆಗಿರುತ್ತೇನೆ. ಆನ್ ಲೈನ್ ನಲ್ಲಿ

ಪರೀಕ್ಷೆ ತೆಗೆದುಕೊಳ್ಳುವುದು ಭಾರತದಲ್ಲಿ ಗುರುತಿಸಲ್ಪಟ್ಟಿರುತ್ತದೆ. ಸದರಿ ಸಂಸ್ಥೆಯ ಮುಖ್ಯಸ್ಥರು ಮಾರ್ವಿನ್ ಜಾಯ್ ಆಗಿದ್ದರು. ಸದರಿ ಸಂಸ್ಥೆಯವರು ಸರ್ಟಿಫಿಕೇಟ್ ನೀಡಲು ಅವರ ದೇಶದಲ್ಲಿ ಅನುಮತಿ ಪಡೆದುಕೊಂಡಿರುತ್ತಾರೆ, ಸದರಿ ಕೋರ್ಸ್ ನಲ್ಲಿ ನಾನು ಪರೀಕ್ಷೆ ಬರೆಯಲು ಉತ್ತೀರ್ಣನಾಗಿರುವ ಬಗ್ಗೆ ಉತ್ತೀರ್ಣರಾದ ದಾಖಲೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ತನ್ನ ಕಡತದಿಂದ ಒಂದು ಸರ್ಟಿಫಿಕೇಟ್ ನ ಜೆರಾಕ್ಸ್ ಪ್ರತಿಯನ್ನು ತೋರಿಸಿರುತ್ತಾರೆ ಹಾಗೂ ಇದರ ಮೂಲ ಪ್ರತಿಯು ಮನೆಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ.

ನನ್ನ ಕಛೇರಿಯು ಮೈಸೂರಿನಲ್ಲಿ ಇದೆ. ನಾನು ಬೇರೆ-ಬೇರೆ ನಗರದಿಂದಲೂ ಸಹ ಚೆಕ್ಕ್ ಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಪರೀಶೀಲನೆ ಮಾಡಿ ಅಭಿಪ್ರಾಯ ನೀಡಿರುತ್ತೇನೆ. ನಾನು ತೆರೆದಿರುವ ಕಛೇರಿಗೆ ಕರ್ನಾಟಕ ಸರ್ಕಾರದಿಂದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದು ನನ್ನ ವೃತ್ತಿಯಾಗಿದ್ದು, ನನ್ನ ಅಭಿಪ್ರಾಯ ತಿಳಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯವನ್ನು ನೀಡುವಾಗ ನನ್ನ ಸರ್ಟಿಫಿಕೇಟ್ ಮತ್ತು ನೋಂದಣಿ ಸಂಖ್ಯೆಗಳನ್ನು ನನ್ನ ಲೆಟರ್ ಹೆಡ್ ನಲ್ಲಿ ನಮೂದು ಮಾಡಿ ಅಭಿಪ್ರಾಯವನ್ನು ನೀಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಹಾಗೆಯೇ ಅಭಿಪ್ರಾಯವನ್ನು ನೀಡಿರುತ್ತೇನೆಂದು ಹೇಳುತ್ತಾರೆ. ನಾನು ನನ್ನ ಕಛೇರಿ ತೆರೆಯಲು ಕಾರ್ಪೋರೇಷನ್ ರವರಿಂದ ಪರವಾನಗೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ.

ನನಗೆ ಸರ್ಕಾರದಿಂದ ಯಾವುದೇ ದಾಖಲೆಗಳನ್ನು ನನ್ನ ಅಭಿಪ್ರಾಯಕ್ಕೆ ಕಳುಹಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೈಸೂರಿನ ಮುಡಾ ಸಂಸ್ಥೆಯಿಂದ ನನಗೆ ಅಭಿಪ್ರಾಯವನ್ನು ಕೋರಿ ಮನವಿ ಸಲ್ಲಿಸಿದ್ದರು. ಅಲ್ಲದೇ ಬೆಂಗಳೂರಿನ ಪೊಲೀಸರು ಅಭಿಪ್ರಾಯವನ್ನು ಕೋರಿ ಮನವಿ ಸಲ್ಲಿಸಿದ್ದರು ಎಂದು ಹೇಳಿ ಸದರಿ ಮನವಿ ಪತ್ರಗಳನ್ನು ತಮ್ಮ ಕಡತದಿಂದ ತೆಗೆದು ತೋರಿಸಿರುತ್ತಾರೆ, ನಾನು ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳಲ್ಲಿ ಹಾಜರಾಗಿ ಹ್ಯಾಂಡ್ ರೈಟಿಂಗ್ ಬಗ್ಗೆ ಸಾಕ್ಷ್ಯ ನುಡಿದಿರುತ್ತೇನೆ.

ನೀವು ನಿಮ್ಮ ಅಭಿಪ್ರಾಯವನ್ನು ನೀಡಲು ಸರ್ಕಾರದಲ್ಲಿ ನೋಂದಣಿ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಸಾಮಾನ್ಯವಾಗಿ ಹ್ಯಾಂಡ್ ರೈಟಿಂಗ್ ಎಕ್ಸ್ ಫರ್ಟ್ಸ್ ಅಭಿಪ್ರಾಯ ನೀಡುವಾಗ 24 ಅಂಶಗಳನ್ನು ಗಮನಿಸುತ್ತೇವೆ. ಆದರೆ ಎಲ್ಲಾ ಪ್ರಕರಣಗಳಲ್ಲೂ 24 ಅಂಶಗಳನ್ನು ಗಮನಿಸಲು ಅವಶ್ಯಕತೆ ಇರುವುದಿಲ್ಲ.

<u>Question</u>: is it true that, standard of writing is one among the 24 factors.

<u>Answer</u>: No, more importance is given to individual writing than standard of writing.

<u>Question</u>: I put to you, while comparing you have to consider subjective and objective comparison.

Answer: Yes. I have applied the same principle in this case.

Question: I put to you, that you have consider curves and strokes while identifying individual handwriting.

Answer: Yes. Apart from that angles and slant of the alphabets, straight lines, averages and deviations of the whole word., alignment of the word and etc.

Question: I put you, that identification and non identification of the words can be known by comparing the curves and strokes.

Answer: Curves and strokes can be forged, hence other aspects are also crucial.

ನಿಮ್ಮ ಅಭಿಪ್ರಾಯದ ಪ್ರಕಾರ " ಕಚ್ಚಾಲೀಕಾಪಡಿ" ಎಂದರೇನು ಎಂದರೆ ಸಾಕ್ಷಿಯು 3 ನೇ ವ್ಯಕ್ತಿ ಬರೆದರೆ ಅದನ್ನು ಆ ರೀತಿ ಕರೆಯುತ್ತೇವೆ ಎಂದು ಹೇಳುತ್ತಾರೆ. ನಿಮ್ಮ ಅಭಿಪ್ರಾಯದ ಪ್ರಕಾರ tekachatra ಎಂದರೇನು ಎಂದರೆ ಸಾಕ್ಷಿಯು ಈ ಪದ ಕನ್ನಡದ ಪದ ಇರಬಹುದು ನನಗೆ ಅದು ಗೊತ್ತಿಲ್ಲ ಎಂದು ಹೇಳುತ್ತಾರೆ. tekachatra ಎಂದರೆ ಬೇರೆಯವರು ಬಲವಂತವಾಗಿ ಬರೆದಂತಹ ಬರವಣಿಗೆಯ ಬಗ್ಗೆ ಪರೀಕ್ಷೆ ಮಾಡುವುದು ಎಂದರೆ ನಿಖರವಾಗಿ ಹೇಳಲಾಗುವುದಿಲ್ಲ. ಕಚ್ಚಾಲೀಕಾಪಡಿ ಮತ್ತು tekachatra ಈ ಎರಡು ಪರೀಕ್ಷಾ ಕ್ರಮವನ್ನು ಅನುಸರಿಸಿದಲ್ಲಿ ಮಾತ್ರ ನಾನು ಸರಿಯಾದ ಅಭಿಪ್ರಾಯವನ್ನು ನೀಡಬಹುದು ಎಂದರೆ ಸಾಕ್ಷಿಯು ಈ ಬಗ್ಗೆ ನ್ಯಾಯಾಲಯದಿಂದ ಯಾವುದೇ ಸೂಚನೆ ಇರಲಿಲ್ಲ ಎಂದು ಹೇಳುತ್ತಾರೆ.

ಇಂಕ್ ನ ವಯಸ್ಸನ್ನು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ, ನಿಪಿ. 1 ರ ಮೇಲೆ ಆರೋಪಿಯವರ Admitted Hand writing ಪಡೆದುಕೊಳ್ಳದ ಕಾರಣ ಅದರ ಮೇಲೆ ಸರಿಯಾದ ಅಭಿಪ್ರಾಯ ವ್ಯಕ್ತ ಪಡಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದಿಂದ ಬಂದಿದ್ದ ದಾಖಲೆಗಳ ಆಧಾರದ ಮೇಲೆ ಹೋಲಿಕೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನನ್ನ ವರದಿಯಲ್ಲಿ ಯಾವ ಯಾವ ಅಕ್ಷರಗಳು ಹೋಲಿಕೆ ಆಗುತ್ತಿಲ್ಲ ಎಂದು ನಿಖರವಾಗಿ ನಮೂದು ಮಾಡಿಲ್ಲ ಎಂದರೆ ಸುಳ್ಳು.

ನಾನು ಪರೀಕ್ಷೆಯ ಸಮಯದಲ್ಲಿ ಯು.ವಿ.ಲೈಟ್ ಮತ್ತು ಐ.ಆರ್.ಆರ್.ಲೈಟ್ ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಫೋಟೋಗಳನ್ನು ತೆಗೆದಂತಹ ಕ್ಯಾಮೆರಾ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿಯು ನಾನು ಸ್ಟುಡಿಯೋ ಒಂದರಲ್ಲಿ ಸ್ಟುಡಿಯೋ ಕ್ಯಾಮೆರಾವನ್ನು ಬಳಸಿ ನಾನೇ ಫೋಟೋ ತೆಗೆದಿರುತ್ತೇನೆ ಎಂದು ಹೇಳಿರುತ್ತಾರೆ. ನಿಪಿ 1 ಚೆಕ್ಕ್ ನ ಫೋಟೋವಾದ ನಿಸಿ. 5 ಫೋಟೋಗು ಮತ್ತು ನಿಪಿ. 1 ನ ಚೆಕ್ಕಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂದರೆ ಸರಿ.

ಒಬ್ಬ ವ್ಯಕ್ತಿ ವಯಸ್ಸಾದಂತೆ ಆತನ ಬರವಣಿಗೆಯಲ್ಲಿಯೂ ಸಹ ಬದಲಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ್ವಲ್ಪ ಬದಲಾಗುತ್ತದೆ ಎಂದು ಹೇಳುತ್ತಾರೆ. 2011 ನೇ ಇಸವಿಯಲ್ಲಿ ಈ ಚೆಕ್ಕನ್ನು ನೀಡಿದ್ದು, ಆರೋಪಿಯ ಮಾದರಿ ಬರವಣಿಗೆಗಳು 2018 ರಲ್ಲಿ ನೀಡಿದ್ದು, ಆ ಕಾರಣದಿಂದಾಗಿ ಹಸ್ತಾಕ್ಷರದಲ್ಲಿ ವ್ಯತ್ಯಾಸವಿರುತ್ತದೆ ಎಂದರೆ ಸಾಕ್ಷಿಯು ಸದರಿ ಬರವಣಿಗೆಯನ್ನು ಇಬ್ಬರೂ ವ್ಯಕ್ತಿಗಳು

ಮಾಡಿರುವುದರಿಂದ ಅದರಲ್ಲಿ ಸಾಕಷ್ಟು ವ್ಯತ್ಯಾಸ ಇದ್ದು, ಅದರಲ್ಲಿ ಒಬ್ಬ ವ್ಯಕ್ತಿ ಬರವಣಿಗೆ ಮಾಡಿದ್ದರೆ, ಅದರಲ್ಲಿ ಸ್ವಲ್ಪ ಮಾತ್ರ ವ್ಯತ್ಯಾಸವಿರುತ್ತಿತ್ತು ಎಂದು ಹೇಳುತ್ತಾರೆ.

ನನಗೆ ಹ್ಯಾಂಡ್ ರೈಟಿಂಗ್ ಮೇಲೆ ಅಭಿಪ್ರಾಯ ವ್ಯಕ್ತ ಪಡಿಸಲು ಯಾವುದೇ ವಿದ್ಯಾರ್ಹತೆ ಇಲ್ಲವೆಂದರೆ ಸರಿಯಲ್ಲ. ನಾನು ಸರ್ಕಾರದಿಂದ ನೋಂದಣಿ ಮಾಡಿಕೊಳ್ಳದೇ ಇರುವುದರಿಂದ ನನಗೆ ಹ್ಯಾಂಡ್ ರೈಟಿಂಗ್ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವ ಅರ್ಹತೆ ಇಲ್ಲವೆಂದರೆ ಸುಳ್ಳು. ನಾನು ಪ್ರತಿವಾದಿಯೊಂದಿಗೆ ಶಾಮೀಲಾಗಿ ಸುಳ್ಳು ವರದಿ ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂಃ ವಿರಾಜಪೇಟೆ.